Sri KONDAJJI BASAPPA.—The information given is that out of 121 villages, only six villages have not got drinking water facilities and all the others have got.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಈ ಆರು ಗ್ರಾಮಗಳು ಯಾವುವು ?

ಶ್ರೀ ಕೊಂಡಜ್ಜಿ ಬಸಪ್ಪ.—ತೆಂಕಲಹುಂಡಿ, ವಡ್ಡನ ಹೊಸಹಳ್ಳಿ, ಸಿದ್ದಾಪುರ, ಲಕ್ಕಿಪುರ, ಮದ್ದೂರು, ಸಂಗೇಗೌಡನ ಹುಂಡಿ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಇನ್ನೂ ಏಳೆಂಟು ಗ್ರಾಮಗಳ ಹೆಸರುಗಳನ್ನು ನಾನು ಅಮೇಲೆ ಕೊಡುತ್ತೇನೆ. Alternative drinking water facilities ಕೊಡುತ್ತೇವೆಂದು ಹೇಳುತ್ತೀರಿ, ಯಾವ ರೀತಿ ಕೊಡುತ್ತೀರಿ ?

ಶ್ರೀ ಕೊಂಡಜ್ಜಿ ಬಸಪ್ಪ.—ಕೆಲವು ಗ್ರಾಮಗಳಲ್ಲಿ ಬಾವಿ ತೋಡಿದರೆ 50 ಅಡಿಗಳ ಮೇಲೆ ಆಳ ಹೊದರೂ ನೀರು ಸಿಕ್ಕದೇ ಇರುವುದರಿಂದ, ಇಂಡಿಯಾ ಸರ್ಕಾರದವರು ನಮಗೊಂದು ಸಲಹೆ ಕೊಟ್ಟಿದ್ದಾರೆ. "ಎಲ್ಲೆಲ್ಲ ಆಳವಾಗಿ ಹೋದರೂ ನೀರು ಸಿಕ್ಕುವುದಿಲ್ಲವೋ ಅಂಥ ಸ್ಥಳಗಳ ಒಂದು ಪಟ್ಟಿ ಮಾಡಿ, ಆ ಬಗ್ಗೆ ಒಂದು ಯೋಜನೆ ಮಾಡಿ, ನಾವು ಅಧಿಕಾರಿಗಳನ್ನು ಕಳುಹಿಸುತ್ತೇವೆ, ಅದಕ್ಕೆ ಪೂರ್ತಿ ಹಣವನ್ನು ಕೊಡುತ್ತೇವೆ ಎಂದು ಹೇಳಿದ್ದಾರೆ. ಅದರ ಪ್ರಕಾರ ನಾವು ಒಂದು ಯೋಜನೆಯನ್ನು ತಯಾರುಮಾಡಿ ಆ ಅಧಿಕಾರಿಗಳನ್ನು ಕರೆಸಿಕೊಂಡು ಕಾರ್ಯಕ್ರಮ ತೆಗೆದು ಕೊಳ್ಳುತ್ತೇವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ದೇತಾಪುರದಲ್ಲಿ ನಾಲ್ಕು ಬಾವಿಗಳನ್ನು ತೋಡಿ, ಒಂದು ಬಾವಿಯಲ್ಲಿಯೂ ನೀರು ಬಂದಿಲ್ಲ. ಯೋಜನೆ ತಯಾರು ಮಾಡುವುದರಲ್ಲೇ ಈಗಾಗಲೇ 15 ವರ್ಷಗಳಾಗುತ್ತಾ ಬಂತು, ಯಾವಾಗ ಪರಿಹಾರ ಕೊಡುತ್ತೀರಿ ?

ಶ್ರೀ ಕೊಂಡಜ್ಜಿ ಬಸಪ್ಪ.—ಈ ಬಗ್ಗೆ ಇಂಡಿಯಾ ಸರ್ಕಾರದ ಕಾಗದ 16-8-1962ರಲ್ಲಿ ನಮಗೆ ಬಂದಿದೆ, ತಕ್ಷಣ ಮುಂದಿನ ಕಾರ್ಯಕ್ರಮ ತೆಗೆದು ಕೊಳ್ಳುತ್ತೇವೆ.

---

## Construction of a Dam across a Halla near Yadiyala in Nanjangud Taluk.

*Q.—561 Sri N. RACHAIAH (Nanjangud).—

Will the Government be pleased to state :—

(*a*) whether it is not a fact that about 500 acres of land would be irrigated if a dam is constructed across a halla near Yadiyala in Nanjangud Taluk ;

(*b*) if so, whether they intend to construct the same ?

A.—Sri ALUR HANUMANTHAPPA (Deputy Minister for Minor Irrigation).—

(*a*) No.

(*b*) This will be examined.

ಶ್ರೀ ಎನ್. ರಾಚಯ್ಯ.—ನಂಜನಗೂಡು ತಾಲ್ಲೂಕು ಎಡಿಯಾಳದ ಹಳ್ಳಕ್ಕೆ ಕಟ್ಟೆ ಕಟ್ಟಿದರೆ ಸುಮಾರು 500 ಎಕರೆ ನೀರಾವರಿಯಾಗುತ್ತದೆಂದು ಹೇಳಿದ್ದುದು ನಿಜವಲ್ಲವೇ ?

† ಶ್ರೀ ಆಲೂರು ಹನುಮಂತಪ್ಪ—ಅರವತ್ತು ಎಕರೆ ವರೆಗೆ ಆಗಬಹುದೆಂದು ಅಂದಾಜು ತಯಾರಾಗುತ್ತಿದೆ.

ಶ್ರೀ ಎನ್. ರಾಚಯ್ಯ.—ಆಲ್ಲಿ ಅಣೆಕಟ್ಟು ನಿರ್ಮಾಣ ಮಾಡುವುದು ಸರ್ಕಾರದ ಉದ್ದೇಶವೆ ?

ಶ್ರೀ ಆಲೂರು ಹನುಮಂತಪ್ಪ.—Investigation ನಡೆಯುತ್ತಿದೆ.

ಶ್ರೀ ಎನ್. ರಾಚಯ್ಯ.—ಐದಾರು ಗ್ರಾಮಗಳಿಗೆ ಅನುಕೂಲವಾಗುತ್ತದಲ್ಲದೆ, ಹೆಚ್ಚು ಆಹಾರ ಬೆಳೆಯುವ ಉದ್ದೇಶ ಸರ್ಕಾರಕ್ಕಿರುವುದರಿಂದ ಇದಕ್ಕೆ ಗಮನ ಕೊಡುತ್ತಾರೆಯೇ ?

ಶ್ರೀ ಆಲೂರು ಹನುಮಂತಪ್ಪ.—ಉದ್ದೇಶವಿದೆ, ಪರೀಕ್ಷೆ ಮಾಡುತ್ತಿದ್ದಾರೆ.

ಶ್ರೀ ಎಚ್. ರಾಚಯ್ಯ.—ಇಂಜಿನಿಯರು ಯಾವಾಗಲೂ ನೀರು ಹರಿಯುತ್ತಿರುವ ಹಳ್ಳವನ್ನು ಬಿಟ್ಟು ಬೇರೆ ಹಳ್ಳಕ್ಕೆ ಪ್ಲಾನ್‌ಮಾಡಿ ಕಳುಹಿಸಿದ್ದಾರೆಯೇ ?

ಶ್ರೀ ಆಲೂರು ಹನುಮಂತಪ್ಪ.—Investigation ಪೂರ್ತಿ ಆಗಿಲ್ಲ, ಆದ ಮೇಲೆ ಏನು ಸಾಧ್ಯವೋ ಅದನ್ನು ಮಾಡುತ್ತೇವೆ.

9-00 A.M.

ಶ್ರೀ ಡಿ. ಎಂ. ಸಿದ್ದಯ್ಯ.—ಎಡಿಯಾಲ ಹಳ್ಳವನ್ನು Investigation ಮಾಡಿಸಿ 500 ಎಕರೆ irrigate ಆಗುವುದಿಲ್ಲವೆಂದು ಹೇಳುತ್ತಿದ್ದೀರಾ, ಅಥವಾ ಏನೂ Investigation ಮಾಡಿಸದೆ ಹಾಗೇ ಹೇಳುತ್ತಿದ್ದೀರಾ ?

ಶ್ರೀ ಆಲೂರು ಹನುಮಂತಪ್ಪ.—'Rough' ಅಂದಾಜಿನ ಮೇಲೆ ಹೇಳುತ್ತಿದ್ದೇನೆ. ಐದುನೂರು ಎಕರೆಗಳಾಗುವ ಪ್ರಾಜೆಕ್ಟ್ ಆಗಿಲ್ಲದಿರಬಹುದು.

ಶ್ರೀ ಡಿ. ಎಂ. ಸಿದ್ದಯ್ಯ.—ಸರಿಯಾಗಿ Investigation ಮಾಡುವುದಕ್ಕೆ ಮುಂಚೆಯೇ 50-60 ಎಕರೆಗಳ ಪ್ರಾಜೆಕ್ಟ್ ಆಗಬಹುದೆಂದು ಯಾವ ಆಧಾರದ ಮೇಲೆ ಹೇಳುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ಅಂದಾಜಿನ ಮೇಲೆ ಹೇಳಿದೆ. ಹೆಚ್ಚಾದರೆ ಸಂತೋಷ.

ಶ್ರೀ ಬಿ. ಕೆ. ಪುಟ್ಟಯ್ಯ.—ಈ ಅಂದಾಜಿನ ಪೊಬಲಗೆಷ್ಟು ?

ಶ್ರೀ ಆಲೂರು ಹನುಮಂತಪ್ಪ.—ಇನ್ನೂ finalise ಆಗಿಲ್ಲ.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—50-60 ಎಕರೆ ಎಂಬುದು ಸ್ಥಳ ಬದಲಾವಣೆ ಮಾಡಿದ್ದರಿಂದಲ್ಲವೇ ! ಶ್ರೀಮಾನ್ ರಾಚಯ್ಯನವರು ಹೇಳಿದ ಹಾಗದಲ್ಲೇ ಮಾಡಿದರೆ ಕೊನೆಯ ಪಕ್ಷ 100 ಎಕರೆಗಳಿಗಿಂತಲೂ ಹಾನಿ ಎಕರೆಗಳಾಗುತ್ತವೆಂದು ಗೊತ್ತಿದೆಯೇ ?

ಶ್ರೀ ಆಲೂರು ಹನುಮಂತಪ್ಪ.—Examine ಮಾಡಿಸುತ್ತೇನೆ.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—ಬಹಳ ದಿವಸಗಳಿಂದಲೂ ಹೇಳುತ್ತಿದ್ದರೂ ಪರಿಶೀಲನೆಗೇ ಇಷ್ಟು ದಿವಸವಾದರೆ. ಇನ್ನು ಕೆಲಸ ಪ್ರಾರಂಭ ಯಾವಾಗ ಆಗುತ್ತದೆ ?

ಶ್ರೀ ಆಲೂರು ಹನುಮಂತಪ್ಪ.—ಎಷ್ಟೋ ದಿವಸದಿಂದ ಅಂದಾಜು ಮಾಡುತ್ತಿದ್ದಾರೆಂಬ ವಿಷಯ ನರಿಯಲ್ಲ. ಆದಷ್ಟು ಜಾಗ್ರತೆ ಮಾಡುತ್ತೇವೆ.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—ಎಷ್ಟು ದಿವಸದಿಂದ ಈ ಪರಿಶೀಲನೆ ನಡೆಯುತ್ತಿದೆ ?

ಶ್ರೀ ಆಲೂರು ಹನುಮಂತಪ್ಪ.—ಆ ಅಂಕಿ ಅಂಶಗಳು ನಮ್ಮಲ್ಲಿಲ್ಲ.

ಶ್ರೀ ಎನ್. ರಾಚಯ್ಯ.—ಬೇಸಿಗೆಯಲ್ಲಿಯೂ ಸುಮಾರು 1-½ ಅಡಿ ನೀರು ಹರಿಯುತ್ತಿರುತ್ತದೆ. ಬೇರೆ ಕಡೆ ಫ್ಲಾನ್ ಮಾಡುವುದರಿಂದ ಇದು ನರಿ ಹೋಗುವುದಿಲ್ಲ. ಯಡಿಯಾಲದ ಬಳಿ ಕುದುರಗಟಳ್ಳ ಭಾರಿ ಹಳ್ಳ ಅಲ್ಲಿ ಮಾಡಬೇಕು.

ಶ್ರೀ ಆಲೂರು ಹನುಮಂತಪ್ಪ.—ಮಾನ್ಯ ಸದಸ್ಯರ ಸೂಚನೆಯನ್ನು ಪರಿಶೀಲನೆ ಮಾಡುತ್ತೇವೆ.

---

## Survey of Metrekal Anecut near Doddalahally in Kanakapura Taluk.

*Q.— 572. Sri K. S. SHIVALINGE GOWDA (Virupakshipura).—

Will the Government be pleased to state :—

(*a*) whether they are aware of the fact that survey of Metrekal Anecut near Doddalahally in Uyyamaballi Hobli, Kanakapura Taluk, has been completed and is to be sanctioned ;

(*b*) if so, whether they will sanction the same early ?

*A.*—Sri ALUR HANUMANTHAPPA (Deputy Minister for Minor Irrigation).—

(*a*) No.

(*b*) This does not arise in view of reply to Clause (*a*).

ಶ್ರೀ ಕೆ. ಎಸ್. ಶಿವಲಿಂಗೇಗೌಡ.—ನನ್ನ ಪ್ರಶ್ನೆಗೆ ಉತ್ತರವಾಗಿ 'ಗೊತ್ತಿಲ್ಲ' ಎಂದು ಉತ್ತರ ಹೇಳಿದ್ದೀರಿ. ನನ್ನ ಗಮನಕ್ಕೆ ಬಂದಿರುವ ಹಾಗೆ 3½ ಲಕ್ಷ ರೂಪಾಯಿಗಳಿಗೆ ಎಸ್ಟಿಮೇಟಾಗಿದೆ, ಮಂಜೂರಾಗಿಲ್ಲ ತಮ್ಮ ಅಭಿಪ್ರಾಯ ಏನು ?

†ಶ್ರೀ ಆಲೂರು ಹನುಮಂತಪ್ಪ.—ತಾವು ತಮ್ಮ ಪ್ರಶ್ನೆಯಲ್ಲಿ 'ಅಣೆಕಟ್ಟು' ಎಂದು ಕೇಳಿದ್ದೀರಿ, ಆದ್ದರಿಂದ 'ಗೊತ್ತಿಲ್ಲ' ಎಂದು ಹೇಳಿದೆ. ಅಲ್ಲ ಒಂದು ಕೆರೆ propose ಆಗಿದೆ. ಅದಕ್ಕೆ 1 ಲಕ್ಷ ಚಿಲ್ಲರೆ ಅಂದಾಜು.

ಶ್ರೀ ಕೆ. ಎಸ್. ಶಿವಲಿಂಗೇಗೌಡ.—ಎಸ್ಟಿಮೇಟ್ ಆಗಿ ಎಷ್ಟೋ ದಿವಸವಾಗಿದೆ. ಇನ್ನೆಷ್ಟು ದಿವಸದಲ್ಲಿ ಮಂಜೂರಾಗುತ್ತದೆ ?

ಶ್ರೀ ಆಲೂರು ಹನುಮಂತಪ್ಪ.—ಸರ್ಕಾರದ ಪರಿಶೀಲನೆಯಲ್ಲಿದೆ. ಜಾಗ್ರತೆ ಮಾಡಬೇಕೆಂದಿದ್ದೇವೆ.

ಶ್ರೀ ಟಿ. ಮಾದಯ್ಯಗೌಡ.—ಈ ಕೆರೆ ಕಟ್ಟುವುದರಿಂದ ಎಷ್ಟೆಕರೆ ಸಾಗುವಳಿಗೆ ಬರುತ್ತದೆ ?

ಶ್ರೀ ಆಲೂರು ಹನುಮಂತಪ್ಪ.—330 ಎಕರೆಗಳು.

ಶ್ರೀ ಟಿ. ಮಾದಯ್ಯಗೌಡ.—ಎಸ್ಟಿಮೇಟ್ ಆಗಿದ್ದರೂ ನಿಧಾನವಾಗುವುದಕ್ಕೆ ಕಾರಣವೇನು ?

ಶ್ರೀ ಆಲೂರು ಹನುಮಂತಪ್ಪ.—ಈಗ ಎಸ್ಟಿಮೇಟ್ ಬಂದಿದೆ. ಅವ್ವರಿಂದ ಬಜೆಟ್ ಎಸ್ಟಿಮೇಟ್‌ಗಳಲ್ಲಿ ಸೇರಿಸಲಲ್ಲ. ಹೀಗಾಗಿ ಸ್ವಲ್ಪ ದಿವಸ ತಡವಾಗುತ್ತದೆ?

ಶ್ರೀ ಕೆ. ಎಸ್. ಶಿವನಂಜಪ್ಪ.—ಈ ಸಾರಿಯಾದರೂ ಆದಷ್ಟು ಜಾಗ್ರತೆ ಮಂಜೂರಾತಿ ಕೊಡುತ್ತೇವೆಂದು ಭರವಸೆ ಕೊಡುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ಹೆಚ್ಚಿಗೆ ಹಣ ಬೇಕೆಂದು ಕೇಂದ್ರ ಸರ್ಕಾರದವರನ್ನು ಕೇಳಿದ್ದೇವೆ. ಬಂದ ತಕ್ಷಣ ಕೆಲಸವನ್ನು ಕೈಕೊಳ್ಳಬೇಕೆಂದು ಮಾಡಿದ್ದೇವೆ.

---

## Allotment of a N.E.S. Block to Surpur.

*Q.—624. Sri MAHANTASWAMI (Shahapur).—

Will the Government be pleased to state :—

(*a*) the reyasons for not yet allotting an N. E. S. block to Surpur ;

(*b*) whether they intend to allot a N. E. S. Block to Surpur ;

(*c*) if so, when ?

*A.*—Sri KONDAJJI BASAPPA (Deputy Minister for Co-operation).—

(*a*) The Government of India have prescribed certain norms for allotment of blocks. The allotment of blocks is made, keeping in view the criteria, such as total number of blocks allotable to a district on the basis of population covered, blocks already allotted, backwardness of the area, food production potential, contiguity of the existing blocks to those to be allotted, etc. Preference is being given to areas where there is preponderence of backward classes and the areas where Agriculture/Veterinary Colleges and Extension Training Centres and similar institutions are situated.

(*b*) Yes.

(*c*) In October, 1962.